ದಿನಾಂಕಃ 16.06.2026

ಅಸಲುದಾವಃ 219/2022

ಪಿ.ಡಬ್ಲ್ಯೂ: 2

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ಮಧುಸೂದನ್ ಅವರು ಬೆಂಗಳೂರಿನಲ್ಲಿ ಯಾವುದೋ ಬಿಸನೆಸ್ ಮಾಡುತ್ತಾರೆ. ಅವರು printing press ನಲ್ಲಿ ಕೆಲಸ ಮಾಡುವುದಾಗಿ ಹೇಳಿದ್ದಾರೆ ಗೊತ್ತಾ ಎಂದರೆ ಸಾಕ್ಷಿ ಹೌದು printing press ನಲ್ಲಿಯೇ ಕೆಲಸ ಎಂದು ಉತ್ತರಿಸುತ್ತಾರೆ. ಅವರು ನಿರ್ಧಿಷ್ಟವಾಗಿ ಇಂತಹದ್ದೆ ಕೆಲಸ ಮಾಡುತ್ತಾರೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಕಾಮಕ್ಷಿಪಾಳ್ಯದಲ್ಲಿ printing press ನಲ್ಲಿ ಕೆಲಸ ಮಾಡುತ್ತಾರೆ ಎಂದು ಉತ್ತರಿಸುತ್ತಾರೆ. ನನಗೆ ಓದಲು ಬರೆಯಲು ಬರುವುದಿಲ್ಲ ಸಹಿ ಮಾತ್ರ ಮಾಡುತ್ತೇನೆ. ನಿಪಿ–24 ರಲ್ಲಿ ನಮುದಿರುವ ಹೆಚ್.ಸಿ.ರಮೇಶ್ ಬಿನ್ ಚೆನ್ನಯ್ಯ ಬದುಕಿದ್ದಾರಾ ಎಂದರೆ ಸಾಕ್ಷಿ ಬದುಕಿದ್ದಾರೆ ಎಂದು ಉತ್ತರಿಸುತ್ತಾರೆ. ಅದೇ ರೀತಿ ರಾಜು.ಇ ಬಿನ್ ಈರಯ್ಯ ಯ ಬದುಕಿದ್ದಾರಾ ಎಂದರೆ ಸಾಕ್ಷಿ ಬದುಕಿದ್ದಾರೆ ಎಂದು ಉತ್ತರಿಸುತ್ತಾರೆ. ಹೆಚ್.ಸಿ.ಶ್ರೀಕಂಠಯ್ಯ ಬಿನ್ ಚಿಕ್ಕಣ್ಣ ಬದುಕಿದ್ದಾರಾ ಎಂದರೆ ಸಾಕ್ಷಿ ತೀರಿಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ನೀವು ಪಂಚಾಯಿತಿ ಸೇರಿದ್ದಾಗಿ ಹೇಳಿದ್ದೀರಿ, ಅದರಲ್ಲಿ ಈ ಮೇಲೆ ಹೇಳಿದವರು ಯಾರೂ ಸೇರಿರಲಿಲ್ಲ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಮಂಚಯ್ಯ ಮತ್ತು ಮಧುಸೂದನ್ ಅವರ ತಂದೆ ಹೆಸರಿನಲ್ಲಿ ಇದ್ದ ದಾಖಲಾತಿಗಳನ್ನು ನೋಡಿರುವುದಾಗಿ ಹೇಳಿದ್ದೀರಿ, ಯಾವ ದಾಖಲಾತಿಗಳನ್ನು ನೋಡಿದ್ದೀರಿ ಎಂದರೆ ಸಾಕ್ಷಿ ಜಂಟಿ ಯಾಗಿ ಬರುತ್ತಿದ್ದ ಆರ್,ಟಿ.ಸಿಗಳನ್ನು ನೋಡಿದ್ದೇನೆ ಎಂದು ಉತ್ತರಿಸುತ್ತಾರೆ. ಎಷ್ಟು ವರ್ಷಗಳ ಹಿಂದಿನಿಂದ ಆ ದಾಖಲಾತಿಗಳನ್ನು ನೋಡಿದ್ದೀರಿ ಎಂದರೆ ಸಾಕ್ಷಿ ಕಾಲುವೆ ಉದ್ದೇಶಕ್ಕಾಗಿ ಭೂ ಸ್ವಾಧೀನವಾದ ನಂತರದಿಂದ ನೊಡಿದ್ದೇನೆ ಎಂದು ಉತ್ತರಿಸುತ್ತಾರೆ. ಭೂ ಸ್ವಾಧೀನವಾಗಿರುವ ಸರ್ವೆ ನಂ. ಜಮೀನಿನಲ್ಲಿ ವಿಭಾಗ ಮಾಡಿಕೊಂಡಿದ್ದಾರಾ ಎಂದು ಆ ದಾಖಲಾತಿಗಳಲ್ಲಿ ನೊಡಿದ್ದೀರಾ ಎಂದರೆ ಸಾಕ್ಷಿ ವಿಭಾಗ ಪತ್ರದಲ್ಲಿ ನೋಡಿಲ್ಲ ಎಂದು ಉತ್ತರಿಸುತ್ತಾರೆ. ಮಂಡ್ಯದಲ್ಲಿ ನಡೆಯುತ್ತಿದ್ದ ಕೇಸ್ ಗಳ ಬಗ್ಗೆ ನಿಮಗೇನು ವಿವರಗಳು ಗೊತ್ತು ಎಂದರೆ ಸಾಕ್ಷಿ ಮಂಡ್ಯದ ಕೇಸ್ ನಡೆಯುತ್ತಿರುವಾಗ ಜೊತೆಯಲ್ಲಿ ಹೊಗುತ್ತಿದ್ದೆ ಎಂದು ಉತ್ತರಿಸುತ್ತಾರೆ. ಮಂಡ್ಯದಲ್ಲಿ ನಡೆಯುತ್ತಿರವ ಕೇಸು ಯಾರ ಯಾರ ನಡುವೆ ನಡೆಯತ್ತಿತ್ತು ಎಂದು ನಿಮಗೇನು ಗೊತ್ತಿಲ್ಲ ಎಂದರೆ ಸಾಕ್ಷಿ

ಮಧುಸೂದನ್ ಅವರು ಮರಿಲಿಂಗಮ್ಮನವರ ಮೇಲೆ ಹಾಕಿರುವ ಕೇಸು ಎಂದು ಉತ್ತರಿಸುತ್ತಾರೆ. ನಿಮ್ಮ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ಗೊತ್ತಾ ಎಂದರೆ ಸಾಕ್ಷಿ ನಾನು ಹೇಳಿರುವುದನ್ನು ವಕೀಲರು ಬರೆದಿದ್ದಾರೆ, ಗೊತ್ತು, ವಕೀಲರಿಂದ ಓದಿಸಿಕೊಂಡಿದ್ದೆನೆ ಎಂದು ಉತ್ತರಿಸುತ್ತಾರೆ. ಭೂ ಸ್ವಾಧೀನವಾಗಿರುವ ಸರ್ವೆ ನಂ. ಸ್ವತ್ತು ಮಧುಸೂದನ್ ಅವರ ತಂದೆಯ ಭಾಗಕ್ಕೆ ಬಂದಿರಲಿಲ್ಲ ಹಾಗೆಯೇ ಜಂಟಿಯಾಗಿಯೂ ಸಹ ಬರುತ್ತಿರಲಿಲ್ಲ ಎಂದರೆ ಸಾಕ್ಷಿ ಜಂಟಿಯೇ ಬರುತ್ತಿತ್ತು ಎಂದು ಉತ್ತರಿಸುತ್ತಾರೆ. ನಿಮಗೆ ಮಧುಸೂದನ್ ಅವರಿಗೆ ತುಂಬಾ ಪರಿಚಯದವರಾಗಿರುವುದರಿಂದ ಅವರ ಎಲ್ಲಾ ರೀತಿಯ ಕೆಲಸಗಳಲ್ಲಿ ನೀವು ಭಾಗಿಯಾಗಿದ್ದೀರಿ ಎಂದರೆ ಸಾಕ್ಷಿ ಆ ರೀತಿ ಏನೂ ಇಲ್ಲ, ನಾನು ಊರಿನ ಮುಖಂಡನಾಗಿರುವುದರಿಂದ ಎಲ್ಲಾ ವಿಷಯಕ್ಕೂ ಕರೆಯುತ್ತಿದ್ದರು, ಜೊತೆಯಲ್ಲಿ ಇರುತ್ತಿದ್ದೆ ಅಷ್ಟೆ ಎಂದು ಉತ್ತರಿಸುತ್ತಾರೆ. ಅದೇ ರೀತಿ ನೀವು ಮಧುಸೂದನ್ ಅವರ ಜೊತೆ ಸೇರಿ 3-4 ಕುಟುಂಬಗಳಿಗೆ ಬಂದ ಭೂ ಪರಿಹಾರದ ಹಣವನ್ನು ಮೋಸ ಮಾಡಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ಸಾಧ್ಯವಾದರೆ ಮಧುಸೂದನ್ ಅವರಿಗೆ ಸಹಾಯ ಮಾಡಲು ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ನಾನು ಸುಳ್ಳು ಸಾಕ್ಷ್ಯ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ. ಮಧುಸೂದನ್ ಅವರ ಕುಟುಂಬಕ್ಕಾಗಲಿ, ಮಂಚಯ್ಯನವರ ಕುಟುಂಬಕ್ಕಾಗಲಿ ಯಾವುದೇ ಸಂಬಂಧವಿಲ್ಲದೇ ಇದ್ದರೂ ಜಂಟಿಯಾಗಿ ಬರುತ್ತಿತ್ತು ಎಂದು ಮಧುಸೂದನ್ ಅವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ, ಇರುವುದನ್ನೆ ಹೇಳುತ್ತಿದ್ದೇನೆ ಎಂದು ಉತ್ತರಿಸುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

(ಶ್ರೀಮತಿ.ಹರಿಣಿ.ಎಂ.ಎಸ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.